


ನಿಂತ. ಯಾರದು? ತನ್ನ ಹಿಂದೆ ಮತ್ಯಾರೋ ನಿಂತಿದ್ದಾರೆ! ಅರ್ಧಕ್ಕರ್ಧ ಉದುರಿ ಉಳಿದದ್ದೂ ನರೆತು ಬೆಳ್ಳಗಾಗುತ್ತಿರುವ ಕೂದಲು. ದೊಗಲೆ ಅಂಗಿ ತೊಟ್ಟವನ ಹೊಟ್ಟೆ ದುಂಡಗೆ ಉಬ್ಬಿದೆ. ಮುಖದಲ್ಲಿ ಚರ್ಮ ಸುಕ್ಕುಗಟ್ಟುತ್ತಿದೆ ಮಾತ್ರವಲ್ಲ ನಿಸ್ತೇಜ ಹೆಣದ ಕಳೆ. ಅಂದರೆ, ಹಿಂದೆ ನಿಂತಿರುವವನು ಸುಮಾರು ವಯಸ್ಸಾದವನು. ಥಟ್ಟನೆ ಹಿಂದೆ ತಿರುಗಿ ಯಾರು? ಅಂತ ಕೇಳಿದವನಿಗೆ ಗಾಬರಿಯಾಯಿತು. ಅಲ್ಲಿ ಯಾರೂ ಇಲ್ಲ! ಮತ್ತೆ ಕನ್ನಡಿಯತ್ತ ತಿರುಗಿದ. ಅದೇ ಮನುಷ್ಯ! ಅರಿವಾಗುತ್ತ ಹೋಯಿತು, ಅದು ತನ್ನದೇ ಪ್ರತಿಬಿಂಬ! ತನಗೇನಾಗಿದೆ ಅನ್ನುವ ದಿಗ್ಭ್ರಮೆಯಲ್ಲಿ ಮಹಡಿಯಿಳಿದು ಕೆಳಗೆ ಬಂದ. ಅಚ್ಚರಿಯ ಮುಖದಲ್ಲಿ ತನ್ನತ್ತ ಧಾವಿಸಿದ ತರುಣಿಯ ಮುಖ ನೋಡಿದ. ಎಲ್ಲೂ ನೋಡಿದ ನೆನಪಿಲ್ಲ. ಹೊರಬಾಗಿಲು ಕಾಣಿಸಿ ರಸ್ತೆಗೆ ಬಂದವ ಎದುರು ಕಟ್ಟಡದಿಂದ ಇಳಿದು ಬರುತ್ತಿರುವ ಹುಡುಗಿಯನ್ನು ವಿಚಾರಿಸಿದ: ‘ಇದು ಯಾವೂರು?’ ಅವಳು ಅಚ್ಚರಿಯಲ್ಲಿ ಇವನನ್ನು ನೋಡಿದವಳು. ‘...ಅಂಕಲ್ ಬೆಂಗಳೂರಿದು, ದುಗ್ಗಮ್ಮನಗುಡಿ ಬಡಾವಣೆ ಇದೆಲ್ಲ...’ ಹೇಳಿದ್ದರ ಅಂತುಪಾರು ಹತ್ತದೆ ಕಕ್ಕಾಬಿಕ್ಕಿಯಾಗಿ ನೋಡುತ್ತಿರುವವನ ಹಿಂದೆ